ಓ .ಎಸ್ ನಂಃ 46/2016
ಪಿಡಬ್ಲ್ಯೂಃ 1
ದಿನಾಂಕಃ 08.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ 2 ನೇ ಪ್ರತಿವಾದಿಯ ವಾರಸುದಾರರ ಪರ ಶ್ರೀ ಪಿ ಎನ್ ಕೆ ವಕೀಲರಿಂದಃ</u>

ನನ್ನ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ ದಿನಾಂಕ 21.01.2021 ರ ಕ್ರಯ ಪತ್ರದ ಬಗ್ಗೆ ಹೇಳಿದ್ದು ಸದರಿ ಕ್ರಯ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆಯೇ ಅಂದರೆ ಇಲ್ಲ ಎನ್ನುತ್ತಾರೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಲು ತೊಂದರೆ ಇದೆಯಾ ಅಂದರೆ ಇಲ್ಲ ಎನ್ನುತ್ತಾರೆ. ಹೆಚ್ಚುವರಿಯಾಗಿ ವಾದ ಪತ್ರದಲ್ಲಿ ಸೇರಿಸಿದ ಐಟಂ ನಂಬರ್ 18 ರಿಂದ 20 ಸ್ವತ್ತುಗಳು ಪೈಕಿ ಒಂದು ಕಲ್ಲು ಚಪ್ಪಡಿ ಮನೆ , 2 ಖಾಲಿ ನಿವೇಶನಗಳು ಎಂದರೆ ಸರಿ . ಸದರಿ ಕಲ್ಲು ಚಪ್ಪಡಿ ಮನೆಯಲ್ಲಿಯೇ ನಾವು ಸುಮಾರು ವರ್ಷಗಳಿಂದ ವಾಸ ಮಾಡುತ್ತಿದ್ದೇವೆ ಎಂದರೆ ಸರಿ . ಸದರಿ ಮನೆಯ ಅಕ್ಕ ಪಕ್ಕದಲ್ಲಿ 2 ಖಾಲಿ ನಿವೇಶನಗಳು ಇದೆ ಎಂದರೆ ಸರಿ . ಈ ದಾವೆ ಹೂಡಿದ ಸಮಯದಲ್ಲಿ ದಾವಾ ಸ್ವತ್ತುಗಳನ್ನು ಈ ದಾವೆಯಲ್ಲಿ ಸೇರಿಸಲು ತೊಂದರೆ ಇತ್ತೇ ಎಂದರೆ ಏನೋ ಗೊತ್ತಿಲ್ಲ ಎನ್ನುತ್ತಾರೆ.

ದಾವಾ ಐಟಂ ನಂಬರ್ 18 ರಿಂದ 20 ಸ್ವತ್ತುಗಳು ನನ್ನ ತಂದೆ ಮತ್ತು ನನ್ನ ಎರಡನೇ ಅಣ್ಣ ಬೈರೇಗೌಡನ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ನಿಪಿ 38 ದಾಖಲೆಯನ್ನು ನಾನೇ ನ್ಯಾಯಾಲಯಕ್ಕೆ ಹಾಜರುಪಡಿಸಿರುತೇನೆ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಸ್ವತ್ತುಗಳು ನನ್ನ ತಂದೆ ಮತ್ತು 2 ನೇ ಅಣ್ಣನ ಹೆಸರಿನಲ್ಲಿ ಇದುದರಿಂದ ದಾವಾ ಸಲ್ಲಿಸುವಾಗ ಈ ಸ್ವತ್ತುಗಳನ್ನು ನಾನು ಸೇರಿಸಿಲ್ಲ ಎಂದರೆ ಸರಿಯಲ್ಲ. ನನಗೆ ಈ ದಾವೆಯಲ್ಲಿ ಸಾಕ್ಷಿ ನುಡಿಯಲು ಉಳಿದ ವಾದಿಗಳು ಅಧಿಕಾರ ಪತ್ರವನನ್ನೆನಾದರೂ ನೀಡಿರುತ್ತಾರೆಯೇ ಅಂದರೆ ಇಲ್ಲ ಎನ್ನುತ್ತಾರೆ. ನಿಪಿ 50 ರಿಂದ 53 ಪೋಟೋಗಳನ್ನು ನಾನೇ ನ್ಯಾಯಾಲಯಕ್ಕೆ ಹಾಜರುಪಡಿಸಿರುತೇನೆಯೇ ಅಂದರೆ ಇಲ್ಲ ಎನ್ನುತ್ತಾರೆ . ದಾವಾ ಐಟಂ ನಂಬರ್ 17 ರಲ್ಲಿ 2 ನೇ ಪ್ರತಿವಾದಿಯ ಸಮಾಧಿ ನಿಪಿ 50 ರಿಂದ 53 ರಂತೆ ಇದೆ ಎಂದರೆ ಸರಿ . ಅದೇ ರೀತಿ ಸದರಿ ಜಮೀನಿನಲ್ಲಿ ನಿಪಿ 52 ರಂತೆ ಕೃಷಿ ಹೊಂಡಾ ಸಹ ನಾರಾಯಣಸ್ವಾಮಿ ನಿರ್ಮಾಣ ಮಾಡಿರುತ್ತಾರೆ ಎಂದರೆ ಒಟ್ಟಿಗೆ ಇದ್ದಾಗ

ಮಾಡಿದ್ದು ಎನ್ನುತ್ತಾರೆ. ದಾವಾ ಐಟಂ ನಂಬರ್ 17 ರ ಸ್ವಾಧೀನವನ್ನು ನಾರಾಯಣಸ್ವಾಮಿಯ ವಾರಸುದಾರರು ಈಗಲೂ ಸಹ ಪ್ರತ್ಯೇಕವಾಗಿ ಹೊಂದಿರುತ್ತಾರೆ ಎಂದರೆ ಸರಿಯಲ್ಲ. ಐಟಂ ನಂಬರ್ 7 ರ ಖಾತೆ ಪ್ರತಿವಾದಿ 1 ಮತ್ತು 4 ರವರ ಹೆಸರಿನಲ್ಲಿ ಬರುತ್ತಿದೆ ಎಂದರೆ ಸರಿ . ದಾವಾ ಐಟಂ ನಂಬರ್ 7 ಎಂ ನಂಜುಂಡಪ್ಪನವರ ಕುಟುಂಬಕ್ಕೆ ಸಂಬಂಧಿಸಿದ ಆಸ್ತಿ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಐಟಂ ನಂಬರ್ 17 ನಮ್ಮಕುಟುಂಬಕ್ಕೆ ಸೇರಿದ ಆಸ್ತಿ ಎಂದರೆ ಗೊತ್ತಿಲ್ಲ ಎನ್ನುತ್ತಾರೆ . ನನ್ನ ತಂದೆ ಹೆಸರು ನಂಜುಂಡಪ್ಪ, 6 ನೇ ಪ್ರತಿವಾದಿಯ ತಂದೆ ಹೆಸರೂ ಕೂಡ ನಂಜುಂಡಪ್ಪ ಆದ್ದರಿಂದ ಎರಡೂ ಸ್ವತ್ತುಗಳಲ್ಲಿ ನಂಜುಂಡಪ್ಪನ ಹೆಸರು ಇರುವುದರಿಂದ ಅದಲು ಬದಲಾಗಿರುತ್ತದೆ ಎಂದರೆ ಗೊತ್ತಿಲ್ಲ ಎನ್ನುತ್ತಾರೆ. ಐಟಂ ನಂಬರ್ 18 ರಿಂದ 21 ರವರಗೊ ಸ್ವತ್ತಿನಲ್ಲಿ ವಾದಿಗಳು ಮತ್ತು 1 ರಿಂದ 4 ನೇ ಪ್ರತಿವಾದಿಗಳಿಗೆ 1/7 ಭಾಗ ಪ್ರತ್ಯೇಕ ಪಾಲು ಇದೆ ಎಂದರೆ ಸರಿ . ದಾವಾ ಐಟಂ ನಂಬರ್ 1 ರಿಂದ 16 ಯಾವುದೇ ಭಾಗ ಇಲ್ಲ ಎಂದರೆ ಸರಿಯಲ್ಲ . ಐಟಂ ನಂಬರ್ 17 ಒಂದೇ ಹೆಸರಿನ ವ್ಯಕ್ತಿಯ ಹೆಸರಿನ ಮೇರೆಗೆ ಐಟಂ ನಂಬರ್ 7 ಅದಲು ಬದಲು ಆದ್ದರಿಂದ ಮತ್ತು 2003 ರ ವಿಭಾಗದಲ್ಲಿ ಕಣ್ತಪ್ಪಿನಿಂದ ಬಿಟ್ಟು ಹೋದುದರಿಂದ ನಮಗೆ ದಾವಾ ಐಟಂ ನಂಬರ್ 17 ರಲ್ಲೂ ಯಾವುದೇ ಭಾಗ ಇಲ್ಲ ಎಂದರೆ ಸರಿಯಲ್ಲ.

ದಾವಾ ಐಟಂ ನಂಬರ್ 22 ನಾರಾಣಯಸ್ವಾಮಿ ತನ್ನ ಸ್ವಂತ ಆದಾಯದಿಂದ ಗಳಿಸಿದ ಸ್ವತ್ತು ಆದ ಕಾರಣ ಅದು ಅವರ ಪ್ರತ್ಯೇಕ ಸ್ವತ್ತು ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಸ್ವತ್ತು ನಾರಾಯಣಸ್ವಾಮಿಯ ಸ್ವಯಾರ್ಜಿತ ಆಸ್ತಿ ಅದ್ದರಿಂದ ಅದರಲ್ಲೂ ಕೂಡ ನಮಗೆ ಭಾಗವಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 1 ರಿಂದ 16 ರ ಸಂಬಂಧ 2003 ರಲ್ಲಿಯೇ ನೊಂದಾಯಿತ ವಿಭಾಗ ಪತ್ರ ನಿಪಿ 3 ರಂತೆ ಆಗಿರುವುದರಿಂದ ನಮಗೆ ಸದರಿ ಸ್ವತ್ತುಗಳಲ್ಲಿ ಹಿಂದೂ ವಾರಸು ತಿದ್ದುಪಡಿ ಕಾಯಿದೆ ಪ್ರಕಾರ ನಮಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲ ುಃ ತಮ್ಮ ಕೌಂಟರ್ ಕ್ಲೇಮ್ ಆಧಾರದ ಮೇರೆಗೆ **1** ಮತ್ತು **4** ನೇ ಪ್ರತಿವಾದಿ ಪರ ಶ್ರೀ ಡಿ ಎನ್ ಪಿ ವಕೀಲರಿಂದಃ</u>

ಐಟಂ ನಂಬರ್ 17 ರಲ್ಲಿ ಕೃಷಿ ಹೊಂಡಾ 2 ನೇ ಪ್ರತಿವಾದಿಯ ಸಮಾಧಿ ಇದೆ ಎಂದರೆ ಎಲ್ಲರ ೂ ಒಟ್ಟಿಗೆ ಇದ್ದಾಗ ಕೃಷಿ ಹೊಂಡಾ ಮಾಡಿದ್ದು ಎನ್ನುತ್ತಾರೆ. ಐಟಂ ನಂಬರ್ 17 ರಲ್ಲಿ ಇರುವ ಕೃಷಿ ಹೊಂಡದ ನೀರಿನಿಂದ ಎಲ್ಲಾ ದಾವಾ ಸ್ವತ್ತುಗಳ ವ್ಯವಸಾಯ ಮಾಡಲಾಗುತ್ತದೆ ಎಂದರೆ ಸರಿ . ದಾವಾ ಐಟಂ ನಂಬರ್ 17 ನ್ನು ನಂಜುಂಡಪ್ಪ ಮತ್ತು ಅವರ ಕುಟುಂಬದವರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿ . ದಾವಾ ಐಟಂ ನಂಬರ್ 17 ಮೂಾಲತಃ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ . ಹಾಲಿ ದಾವಾ ಐಟಂ ನಂಬರ್ 17 ರ ಪಹಣಿ 6 ನೆ ಪ್ರತಿವಾದಿ ನನ್ನ ದೊಡ್ಡಪ್ಪನ ಮಗಳು ಉಮಾದೇವಿ ಹೆಸರಿಗೆ ಬರುತ್ತಿದೆ ಎಂದರೆ ಸರಿ . ಸದರಿ ಸ್ವತ್ತಿನ ಸಂಬಂಧ ಉಮಾದೇವಿಯವರ ಕುಟುಂಬದವರು ನಿಪಿ 42 ರಂತೆ ಕಾನೂನು ಬಾಹಿರ ವಿಭಾಗ ಪತ್ರ ಮಾಡಿಕೊಂಡಿರುತ್ತಾರೆ ಎಂದರೆ ಸರಿ . ದಾವಾ ಐಟಂ ನಂಬರ್ 7 ಮೂಾಲತಃ 6 ನೇ ಪ್ರತಿವಾದಿಯ ತಂದೆಯ ಸ್ವತ್ತು ಎಂದರೆ ಸರಿ . ಸದರಿ ಸ್ವತ್ತಿನಲ್ಲಿ ನಮ್ಮ ಒಟ್ಟು ಕುಟುಂಬದವರು ಯಾರು ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿ . ನನ್ನ ತಂದೆಗೆ ಸುಮಾರು 20 ವರ್ಷದಿಂದ ಕಿವಿ ಕೇಳಿಸುವುದಿಲ್ಲ ಎಂದರೆ ಸರಿ . ದಾವಾ ಐಟಂ ನಂಬರ್ 22 ನಂಜುಂಡಪ್ಪನ ಹೆಸರಿನಲ್ಲಿ ಇತ್ತು ಎಂದರೆ ಸರಿ. ಎಲ್ಲಾ ದಾವಾ ಸ್ವತ್ತುಗಳಲ್ಲಿ ಸಮಾನ ಭಾಗ ಆಗಲು ನನ್ನ ಅಭ್ಯಂತರ ಇಲ್ಲ ಎಂದರೆ ಸರಿ. ದಾವಾ ಐಟಂ ನಂಬರ್ 22 ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿ .

**5 ಮತ್ತು 6 ನೇ ಪ್ರತಿವಾದಿಗಳ ಪಾಟೀ ಸವಾಲನ್ನು ಮಧ್ಯಾಹ್ನಕ್ಕೆ ಮುಂದೂಡಲಾಗಿದೆ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ರಹೀಮ್ ಅಲಿ ಎಮ್ ನದಾಫ್ )
ಅಪರ ಹಿರಿಯ ಸಿ.ಜೆ ಮತ್ತು ಜೆಎಂಎಫ್ ಸಿ
ಕೆಜಿಎಫ್